**ಸಾಕ್ಷಿಯನ್ನು ದಿಃ *01/12/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಜಿವಿಬಿ ವಕೀಲರಿಂದ 2 ಮತ್ತು 3 ನೇ ಪ್ರತಿವಾದಿ ಪರವಾಗಿ.***

ನನಗೆ ಓದಲು ಬರೆಯಲು ಬರುವುದಿಲ್ಲ, ಕಾರಣ ನಾನು ಶಾಲೆ ಕಲಿತಿಲ್ಲ. ಸದರಿ ದಾವೆ ಯಾವ ಕಾರಣಕ್ಕೆ ಹಾಕಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ದಾವಾದಾಸ್ತಿ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ನನ್ನ ಪ್ರಮಾಣಪತ್ರದಲ್ಲಿ ಬರೆದಿರುವ ಸರ್ವೇ ನಂಬರ ಮಾಹಿತಿ ನಾನು ಕೊಟ್ಟಿಲ್ಲ.

ಪ್ರತಿವಾದಿ ನಂ.1 ಈರವ್ವ ನನಗೆ 7-8 ವರ್ಷಗಳಿಂದ ಪರಿಚಯ. ಅವರ ಜಮೀನನ್ನು 7-8 ವರ್ಷಗಳಿಂದ ಅವರ ಹೇಳಿಕೆ ಮೇರೆಗೆ ನಾನೇ ಸಾಗುವಳಿ ಮಾಡುತ್ತಿದ್ದೇನೆ. ಸಾಗುವಳಿ ಮಾಡುತ್ತಿರುವ ಜಮೀನು ಹೆಬ್ಬಳ್ಳಿ ರಸ್ತೆ ಹತ್ತಿರ ಇರುತ್ತದೆ. ಸದರಿ ಹೆಬ್ಬಳ್ಳಿಗೆ ಹೋಗುವುದಕ್ಕೆ ನಾಲ್ಕು ರಸ್ತೆಗಳು ಇರುತ್ತವೆ ಎಂದರೆ ನಿಜ. ನಾನು ಹೆಬ್ಬಳ್ಳಿಗೆ ಹೋಗುವ ರಸ್ತೆಯಲ್ಲಿ ಹೋಗಿ ಜಮೀನು ಸಾಗುವಳಿ ಮಾಡುತ್ತಿದ್ದೆ. ಈ ರೀತಿ ಇರುವ ನಾಲ್ಕು ರಸ್ತೆಗಳಲ್ಲಿ ಟ್ರ್ಯಾಕ್ಟರ ಹೋಗುತ್ತವೆ ಎಂದರೆ ನಿಜ.

ಈರವ್ವ ಇವರದು ಮೂಲತ ಯಾವ ಊರು ಎಂದು ನನಗೆ ಗೊತ್ತಿಲ್ಲ. ಸದರಿಯವರ ಜಮೀನಿನಲ್ಲಿ ನಾವು ಹೆಸರು ಮತ್ತು ಜೋಳ ಬಿತ್ತುತ್ತೇವೆ. ನಾನು ಉಳುಮೆ ಮಾಡುವುದಕ್ಕೆ ನಮ್ಮ ಊರಾದ ಕಬ್ಬೇನೂರ ಗ್ರಾಮದಿಂದ ಹಾರೋಬೆಳವಡಿ ಗ್ರಾಮಕ್ಕೆ ಹೋಗುತ್ತಿದ್ದೆ. ಸದರಿ ಜಮೀನು ಉಳುಮೆ ಬೇರೆಯವರು ಸಹ ಮಾಡುತ್ತಿದ್ದರು ಎಂದರೆ ನಿಜ. ಆದ್ದರಿಂದ ನಾನು ಯಾವತ್ತು ಉಳುಮೆ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಸದರಿ ಈರವ್ವ ಜಮೀನು ಸಾಗುವಳಿ ಮಾಡು ಎಂದು ಯಾವತ್ತು ಹೇಳಿಲ್ಲ ಎಂದರೆ ಸರಿಯಲ್ಲ.

ಈರವ್ವಳಿಗೆ ನಾಲ್ಕು ಜನ ಹೆಣ್ಣುಮಕ್ಕಳು ಇದ್ದು, ಅದರಲ್ಲಿ ಇಬ್ಬರದೂ ಮಾತ್ರ ಪರಿಚಯವಿದೆ. ಸದರಿ ಹೆಣ್ಣುಮಕ್ಕಳು ನನಗೆ 10-12 ವರ್ಷಗಳಿಂದ ಪರಿಚಯವಿರುತ್ತಾರೆ. ಸದರಿ ಹೆಣ್ಣುಮಕ್ಕಳೇ ದಾವಾದಾಸ್ತಿಯ ಜಮೀನಿನಲ್ಲಿ ಕಬ್ಜೆಯಲ್ಲಿದ್ದಾರೆ ಎಂದು ಹೇಳಿದ್ದು ನಿಜವಿರುತ್ತದೆ. ಈ ಕುರಿತು ನಾನು ದಾಖಲೆ ಹಾಜರುಪಡಿಸಿಲ್ಲ. 2023 ರಲ್ಲಿ ಈರವ್ವಳು ತೀರಿಹೋಗಿದ್ದು ನಂತರ ನನಗೆ ಯಾರು ಸಹ ಸಾಗುವಳಿ ಮಾಡಬೇಕೆಂದು ಹೇಳಿಲ್ಲ. ನನ್ನ ಪ್ರಮಾಣಪತ್ರದ 3 ನೇ ಖಂಡಿಕೆಯಲ್ಲಿ ಈರವ್ವ ತೀರಿಹೋದ

ನಂತರ ಅವರ ಹೆಣ್ಣುಮಕ್ಕಳು ಸಾಗುವಳಿ ಮಾಡಲು ಹೇಳಿರುತ್ತಾರೆ ಎಂದು ಬರೆದುಕೊಂಡಿದ್ದು ಸುಳ್ಳು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸಾಗುವಳಿ ಮಾಡಬೇಕೆಂದು ಹೇಳಿರುತ್ತಾರೆ ಎಂದು ಉತ್ತರಿಸುತ್ತಾರೆ.

ನಮ್ಮ ಊರಿನಿಂದ ಸದರಿ ದಾವಾ ಜಮೀನಿಗೆ 6 ಕಿ.ಮಿ.ಅಂತರದಲ್ಲಿರುತ್ತದೆ. 2023 ರ ನಂತರ ನಾನು ಹೆಸರನ್ನು ಬಿತ್ತಿರುತ್ತೇನೆ. ನಿ.ಡಿ.2 ರಂತೆ ಇರುವ ಪೋಟೊ ಸಾಕ್ಷಿದಾರರಿಗೆ ತೋರಿಸಲಾಗಿ ಅದರಲ್ಲಿ ಈರವ್ವಳು ಎಲ್ಲಿದ್ದಾಳೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸಾಕ್ಷಿದಾರರು ಹೂವಿನಹಾರ ಹಾಕಿಕೊಂಡ ಕೂತಿರುವ ಮಗುವನ್ನು ಎತ್ತಿಕೊಂಡಿರುವವರು ಈರವ್ವ ಎಂದು ಉತ್ತರಿಸುತ್ತಾರೆ. ಈ ರೀತಿ ಹಾರ ಹಾಕಿಕೊಂಡು ಕೂತಿರುವ ಮಗು ನನಗೆ ಪರಿಚಯವಿಲ್ಲ. ನಾನು ಸುಳ್ಳು ಪ್ರಮಾಣಪತ್ರದ ಮೂಲಕ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈರವ್ವಳ ಹೆಣ್ಣುಮಕ್ಕಳು ಮತ್ತು ನನ್ನ ನಡುವೆ ಯಾವುದೇ ಲಿಖಿತ ಕರಾರು ಇಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.